155

ಅಷ್ಟಾವಕ್ರ

ಮತ್ತು

ನಿವೃತ್ತಿ-ನಿರತ

(ಎರಡು ಸಣ್ಣ ಕತೆಗಳು)

ಬರೆದವರು:

ವೈದ್ಯಗುರು ಎಂ. ಆರ್. ಭಟ್,

ಮಂಗಳೂರು.

1957.

ಒಂದಾಣೆ ಮಾಲೆ

ಎರಡು ಏಕಾಂಕ ನಾಟಕಗಳು.

"ನಾವು ಸಾಹುಕಾರಕುಲದವರು"

(ಏಕಾಂಕ ಪ್ರಹಸನ)

ರಚಯಿತರು: **ಕುಡ್ಪಿ ವಾಸುದೇವ ಶೆಣೈ.**

ಬಿಡಿಪ್ರತಿಗೆ 0—4—0.

"ಮಹಾಶ್ವೇತಾ"

('ಪತ್ತೇದಾರಿ' ತರಗತಿಯ ಕಥಾವಸ್ತುವನ್ನೊಳಗೊಂಡ ಏಕಾಂಕ ನಾಟಕ)

ಅನುವಾದಕರು: **ವೈದ್ಯಗುರು ಎಂ. ಆರ್. ಭಟ್.**

ಬಿಡಿಪ್ರತಿಗೆ: 0—4—0.

ಇವೆರಡೂ ನಾಟಕಗಳನ್ನು ಅಂಚೆ ಮೂಲಕ ತರಿಸಿಕೊಳ್ಳಲಿಚ್ಛಿಸುವವರು, ಟಪ್ಪಾಲು ಖರ್ಚು ಕೂಡಿ 0—10—0ಗಳನ್ನು ಅಥವಾ 62 ನಯೆ ಪೈಸೆಗಳನ್ನು ಮನಿಯಾರ್ಡರ್ ಮೂಲಕ ಇಲ್ಲವೆ ಅಂಚೆಚೀಟುಗಳ ಮೂಲಕ ಕಳಿಸಬೇಕು.

ಪ್ರಭಾತ ಆಫೀಸು, ರಥಬೀದಿ ಮಂಗಳೂರು.

ಅಷ್ಟಾವಕ್ರ ಮತ್ತು ನಿವೃತ್ತಿ—ನಿರತ

೧. ಅಷ್ಟಾವಕ್ರ

ಪರದಾರ ಪರದ್ರವ್ಯ ಪರದ್ರೋಹ ಪರಾಙ್ಮುಖಃ ।
ಗಂಗಾ ಬ್ರೂತೇಕದಾಗತ್ಯ ಮಾಮಯಂಪಾವಯಿಷ್ಯತಿ ।

ಅಂಗದೇಶದ ರಾಜಧಾನಿ ಚಂಪಾನಗರದಿಂದ ೨೦ ಮೈಲು ದೂರದಲ್ಲಿ ಮತ್ತು ವರ್ತಮಾನ ಭಾಗಲಪುರದಿಂದ ೧೬ ಮೈಲು ದೂರದಲ್ಲಿ ಪೂರ್ವೋತ್ತರ ವಾಹಿನೀ ಗಂಗೆಯ ಪೂರ್ವತಲದ ಮೇಲೆ ಕಲಹಗಾಂವ ಎಂಬ ಹೆಸರಿನ ಊರು ಇದೆ. ಅದು "ಈಸ್ಟರ್ನ್" ರೈಲ್ವೆಯ 'ಲೂಪ್' ಲೈನಿನ ಒಂದು ಸ್ಟೇಷನ್ ಆಗಿರುತ್ತದೆ. ಇಲ್ಲಿಂದ ಒಳಗೆ ಊರಿನಲ್ಲಿ ಮೂರು ಸಣ್ಣ ಗುಡ್ಡಗಳು ಕಾಣುತ್ತವೆ; ಅದಲ್ಲದೆ ಸ್ಟೇಷನದಿಂದ ಪೂರ್ವಕಡೆಯಲ್ಲಿ ಒಂದು ಗುಡ್ಡವೂ ಇದೆ. ಈ ಸ್ಥಾನವು ಪ್ರಾಚೀನ ಸಮಯದಲ್ಲಿ ಮಹರ್ಷಿ ಕಹೋಲನ ಆಶ್ರಮ (ವಾಸ)ವಾಗಿತ್ತು; ಕಹೋಲಗ್ರಾಮ ಭ್ರಂಶವಾಗಿ ಕಲಹಗಾಂವ ವಾಗಿದೆ.

ಕಹೋಲ ಮುನಿಯು ಉದ್ಧಾಲಕನ ಮನೆಯಲ್ಲಿದ್ದು ವಿದ್ಯಾಧ್ಯಯನ ವನ್ನು ಮಾಡುತ್ತಿದ್ದನು. ಉದ್ಧಾಲಕನ ಅಳಿಯನು ಕಹೋಲನು. ಉದ್ಧಾಲಕನ ಆಶ್ರಮವು ಆ ಮೂರು ಗುಡ್ಡಗಳ ಮೇಲೆ ಇತ್ತು; ಹತ್ತಿರ ಹತ್ತಿರ ಶ್ವಶುರ-ಜಾಮಾತರು ಆಶ್ರಮಗಳನ್ನು ಮಾಡಿ ಇರುತ್ತಿದ್ದರು. ಕಹೋಲ ಮುನಿಯು ಅತಿ ತೀಕ್ಷ್ಣಬುದ್ಧಿಯವನು. ಗುರುಕುಲದಲ್ಲಿ ಸಂಪೂರ್ಣ ನಿಯಮಪಾಲನೆಯನ್ನು ಮಾಡಿದವನು.

ಶಿಕ್ಷಣವು ಮುಗಿದಾಗ, ಸುಶೀಲ ಕಹೋಲನು ಗುರುಕನ್ಯೆ ಸುಜಾತೆಯನ್ನು ಮದುವೆಮಾಡಿಕೊಂಡನು. ಈ ಸುಜಾತೆಯ ಗರ್ಭದಲ್ಲಿ ಕಹೋಲನ ಮನೋಭಿರತಿಯ ಪರಿಣಾಮವಾಗಿ ಅಷ್ಟಾವಕ್ರನ ಜನ್ಮವಾಯಿತು. ಗರ್ಭದಲ್ಲಿದ್ದಾಗಲೇ ಅಷ್ಟಾವಕ್ರನು, ಪಿತ ಕಹೋಲನು ಅತಿಶಯ ವೇದಾಧ್ಯಯನವಮಾಡುವುದನ್ನು ಕೇಳಿ, ಹೀಗೆನ್ನುತ್ತಿದ್ದನು:—"ತಾವು ಹೆಚ್ಚು ಓದು

ತ್ತಿದ್ದೀರಿ." ಈ ಪ್ರಕಾರ ಮಹಾಭಾರತದಲ್ಲಿ ಉಲ್ಲೇಖಿಸಲ್ಪಟ್ಟಿದೆ. ಇದರಿಂದ ಪಿತನು ಕ್ರುದ್ಧನಾಗಿ "ಎಂಟು ಅಂಗಗಳಲ್ಲಿ ನೀನು ವಕ್ರನಾಗು," ಎಂದು ಶಪಿಸಿದನು. ಆದುದರಿಂದ ಅವನ ಎಂಟು ಅಂಗಗಳು ವಕ್ರವಾದವು ಮತ್ತು ಅವನ ಹೆಸರು ಅಷ್ಟಾವಕ್ರವಾಯಿತು.

ಅಷ್ಟಾವಕ್ರನ ಜನನದ ಮುಂಚೆ ಕಹೋಲನು ವಿದೇಹರಾಜನ ಯಜ್ಞದಲ್ಲಿ ಆಮಂತ್ರಿತನಾಗಿದ್ದನು; ಜನಕನ ಸಭೆಯ ಪ್ರಧಾನ ಆಚಾರ್ಯ 'ಬಂಧಿ'ಯಾಗಿದ್ದನು. ಈ ಸಭೆಯಲ್ಲಿ ಹಾಜರಿದ್ದ ಎಲ್ಲರೂ ವಾದದಲ್ಲಿ ಆತನಿಂದ ಸೋಲಿಸಲ್ಪಟ್ಟು ವರುಣಲೋಕಕ್ಕೆ ಕಳುಹಿಸಲ್ಪಟ್ಟವರಾದರು. ಅಲ್ಲಿ ವರುಣ ಯಜ್ಞದಲ್ಲಿ ಪಂಡಿತರ ನ್ಯೂನತೆಯಿತ್ತು. ಮಹರ್ಷಿ ಕಹೋಲನು ಸದಾ ಇದೇ ಸ್ಥಾನವನ್ನು ಹೊಂದಿದನು. ಮತ್ತು ವರುಣಲೋಕಕ್ಕೆ ಕಳುಹಿಸಲ್ಪಟ್ಟನು. ಈ ಸಮಯದಲ್ಲಿ ಅಷ್ಟಾವಕ್ರನು ಜನಿಸಿದನು. ಇವನು ಸಹಾ ಕುಶಾಗ್ರಬುದ್ಧಿಯುವನಾದನು.

ಇವನು ತನ್ನ ಸೋದರಮಾವ ಉದ್ದಾಲಕನ ಪುತ್ರ ಶ್ವೇತಕೇತುವಿನೊಡನೆ ಶಿಕ್ಷಣವನ್ನು ಪಡೆಯುತ್ತಿದ್ದನು. ಅವನು ತನ್ನ ಪಿತನನ್ನು ನೋಡದಿರುವ ಕಾರಣ, ಉದ್ದಾಲಕನನ್ನೇ ತಾತನೆಂದು ಕರೆಯುತ್ತಿದ್ದನು.

ಉದ್ದಾಲಕನು ತನ್ನ ಪಿತನಲ್ಲವೆಂದು ಒಂದು ದಿನ ಶ್ವೇತಕೇತುವಿನಿಂದ ಪ್ರಸಂಗವಶಾತ್ ಅರಿತನು. ಕಹೋಲನ ಲೋಕೋತ್ತರಗಮನವನ್ನು ಅಷ್ಟಾವಕ್ರನಿಂದ ಅಡಗಿಸಿ ಇಟ್ಟಿದ್ದರು. ಮಾತೆಯನ್ನು ಸಮೀಪಿಸಿ ಯಥಾಸ್ಥಿತಿಯನ್ನು ಅವಳಿಂದ ಅರಿತಕೂಡಲೇ ಮಿಥಿಲಾನಗರಿಗೆ ಪ್ರಯಾಣ ಬೆಳೆಸಿದನು. ಅಲ್ಲಿ ಜನಕರಾಜನು ಒಂದು ಕಠಿನ ಪ್ರಶ್ನೆಯ ಯಥಾರ್ಥ ಉತ್ತರವನ್ನು ಅಷ್ಟಾವಕ್ರನಿಂದ ಕೇಳಿ ಅವನೊಡನೆ ಶಾಸ್ತ್ರಾರ್ಥವನ್ನು ಮಾಡಲು 'ಬಂಧಿ'ಗೆ ಅನುಮತಿಯನ್ನು ಕೊಟ್ಟನು. ವಾದದಲ್ಲಿ ಬಂದಿಯು ಪರಾಜಿತನಾದನು ಮತ್ತು ಜಲದಲ್ಲಿ ಅಷ್ಟಾವಕ್ರನಿಂದ ಮುಳುಗಿಸಲ್ಪಟ್ಟು ವರುಣನಲ್ಲಿ ಕಳುಹಿಸಲ್ಪಟ್ಟನು. ಅದೇ ಸಮಯ ವರುಣನ ಯಜ್ಞವು ಸಮಾಪ್ತವಾದ ಕಾರಣ, ಪಂಡಿತರೊಡನೆ ಆತನು ವರುಣಲೋಕವನ್ನು ಸಂದರ್ಶಿಸಿದನು.

ಕಹೋಲನು ಯಜ್ಞಮಂಟಪದಿಂದ ಹೊರಗೆ ಬಂದು, ಪುತ್ರನ ವಿದ್ವತ್ತೆಯನ್ನು ಕೇಳಿ ಹೀಗೆಂದನು:

ಇತ್ಯರ್ಥಮಿಚ್ಛತಿ ಸುತಾನ್ ಜನಾ ಜನನ ಕರ್ಮಣಾ ।

ಯದಹಂ ನಾಶಕಂ ಕರ್ತುಂ ತತ್ಪುತ್ರಃ ಕೃತವಾನ್ ಮಮ ।

ಜನರು ಈ ಕಾರಣದಿಂದಲೇ ಪುತ್ರರನ್ನು ಇಚ್ಛಿಸುತ್ತಾರೆ. ಪಿತನು ಮಾಡ ಲಿಚ್ಛಿಸಿದ ಮತ್ತು ಮಾಡಲಶಕ್ಯವಾದ ಕಾರ್ಯವನ್ನು ತನ್ನ ಪುತ್ರರು ಪೂರೈಸಬೇಕೆಂದು ಇಚ್ಛಿಸುತ್ತಾನೆ. ನನ್ನ ಪುತ್ರ ಅಷ್ಟಾವಕ್ರನು ಹೀಗೆಯೇ ಮಾಡಿರುವನು.

ತದನಂತರ ಕಹೋಲನು ಭೂಲೋಕಕ್ಕೆ ಬಂದು ಪುತ್ರನನ್ನು ಸೇರಿ, ಮಾರ್ಗದಲ್ಲಿರುವ ಗಂಗಾ ಸಮಂಗಾ ಸಂಗಮದಲ್ಲಿ ಇಬ್ಬರೂ ಸ್ನಾನವನ್ನು ಮಾಡಿದವರಾದರು. ಅಷ್ಟಾವಕ್ರನ ಅಂಗವಕ್ರತೆಯು ಮಾಯವಾಗಿ ಈ ಸ್ನಾನಾನಂತರ ಸುಂದರಪುರುಷನಾದನು; ಆದರೆ ಹಿಂದಿನ ಹೆಸರೇ ರೂಢಿಯಲ್ಲಿ ಬಂತು.

ಅಷ್ಟಾವಕ್ರನ ಸಮಾವರ್ತನವಾಗಿ, ಗೃಹಸ್ಥಾಶ್ರಮವನ್ನು ಸೇರ ಲೋಸುಗ, ಕನ್ಯಾರ್ಥಿಯಾಗಿ, ಮಹರ್ಷಿ ವದಾನ್ಯನನ್ನು ಸೇರಿ, ಆತನ ಸುಂದರ ಕನ್ಯೆಯನ್ನು ತನಗೆ ವಿವಾಹಮಾಡಿಕೊಡಲು ಆತನಲ್ಲಿ ನಮ್ರತಾ ಪೂರ್ವಕ ಕೇಳಿಕೊಂಡನು. ಆಗ ವದಾನ್ಯನು ಹೀಗೆಂದನು:—"ನನಗೆ, ನಿನ್ನೊಡನೆ ನನ್ನ ಮಗಳ ವಿವಾಹವನ್ನು ಮಾಡಿಕೊಡಲು ಯಾವುದಾದರೂ ಆತಂಕವಿಲ್ಲ; ಆದರೆ ನೀನು ನನ್ನ ಹೇಳಿಕೆಯಂತೆ ಉತ್ತರ ದಿಕ್ಕಿನಲ್ಲಿರುವ ಕುಬೇರದಲ್ಲಿ ಹೋಗಿ ಅಪ್ಸರೆಯ ನರ್ತನ-ಗಾನಗಳನ್ನು ನೋಡುವವ ನಾಗು, ಕೇಳುವವನಾಗು. ಅನಂತರ ಅದಕ್ಕಿಂತ ಎತ್ತರಕ್ಕೆ ಹೋಗಿ, ಒಬ್ಬ ವೃದ್ಧಸ್ತ್ರೀಯ ವಸತಿಯನ್ನು ಸಂದರ್ಶಿಸಿ ಅವಳೊಡನೆ ಸಂಭಾ ಷಿಸಿ ಬರುವವನಾಗು. ಆಗ ನನ್ನ ಕನ್ಯೆಯೊಡನೆ ವಿವಾಹವಾಗುವಿ. ಅನ್ಯಥಾ ಇಲ್ಲ."

ಆಗ ಅಷ್ಟಾವಕ್ರನು ಹೀಗೆಂದನು:—"ಅವಶ್ಯ ನಾನು ಅಲ್ಲಿಗೆ ಹೋಗಿ ಬರುವೆನು." ಹೀಗೆನ್ನುತ್ತ ಉತ್ತರ ದಿಕ್ಕಿಗೆ ಪ್ರಯಾಣ ಬೆಳಸಿದನು. ಹಿಮಾ ಲಯದಲ್ಲಿ ಹೋಗಿ ಕೈಲಾಸದಲ್ಲಿ ಶಿವನಪೂಜೆಯನ್ನು ಮಾಡಿ ಅಲಕಾನಗರ

ವನ್ನು ಸೇರಿದನು. ಅತಿಥಿಸತ್ಕಾರದನಂತರ, ನರ್ತನ-ಗಾನ ಹಾಗೆಯೇ ವಾದ್ಯ ಆದಿಯ ಆಯೋಜನವು ಮಾಡಲ್ಪಟ್ಟಿತು; ಪರಿಣಾಮದಿಂದಲೇ ಅಷ್ಟಾವಕ್ರನು ನೃತ್ಯಗೀತೆಗಳನ್ನು ನೋಡುತ್ತಾ ಕೆಲವು ದಿನಗಳ ತನಕ ಅಲ್ಲಿಯೇ ನಿಂತನು; ಆದರೆ ಈ ನೃತ್ಯಗೀತಾದಿಗಳಿಂದ ಅವನ ಮನಸ್ಸಿನಲ್ಲಿ ಯಾವ ವಿಕಾರವೂ ಉತ್ಪನ್ನವಾಗಲಿಲ್ಲ.

ಅನಂತರ ಯಕ್ಷರಾಜನಿಂದ ಕಳುಹಿಸಲ್ಪಟ್ಟವನಾದನು. ಮುಂದೆ ಹೋಗುತ್ತಾ ಹೇಮಕೂಟಪರ್ವತವನ್ನು ಸೇರಿ, ಶುಷ್ಕಭೂಮಿಯಿಂದ ಹೋಗುತ್ತಾ ಒಂದು ಆಶ್ರಮವನ್ನು ಸೇರಿದನು. ಈ ಆಶ್ರಮವು ಅತ್ಯಂತ ರಮಣೀಯವಾಗಿತ್ತು. ಅಲ್ಲಿ ವಿವಿಧ ಪ್ರಕಾರದ ಸುಗಂಧ ಪುಷ್ಪಗಳ ವೃಕ್ಷಗಳು ಸುಶೋಭಿತವಾಗಿದ್ದವು. ಈ ಮನೋಹರ ಆಶ್ರಮವನ್ನು ದೂರದಿಂದ ನೋಡಿ, ಕೂಡಲೇ ಅದರ ದ್ವಾರವನ್ನು ಸಮೀಪಿಸಿ ಹೀಗೆಂದನು:— "ಈ ಆಶ್ರಮದೊಳಗೆ ಯಾರಾದರೂ ಇದ್ದರೆ, ದಯವಿಟ್ಟು ಹೊರಗೆ ಬಂದು ಅತಿಥಿಯಾದ ನನಗೆ ಆಶ್ರಯವನ್ನು ಕೊಡುವವರಾಗಲಿ."

ಇದನ್ನು ಕೇಳಿದೊಡನೆ ಆಶ್ರಮದೊಳಗಿನಿಂದ ಏಳು ಮಂದಿ ಸುಂದರ ಕನ್ಯೆಯರು ಬಂದರು. ಅವರು ಮಹತ್ತಾದ ಪ್ರೇಮದಿಂದ ಆತನನ್ನು ಸ್ವಾಗತಿಸಿದರು ಮತ್ತು ಒಳಗೆ ಕರೆದುಕೊಂಡು ಹೋದರು. ಒಳಗೆ ಸುವರ್ಣಾಸನದ ಮೇಲೆ ಕುಳ್ಳಿರಿಸಿ, ಪಾದ್ಯ, ಅರ್ಘ್ಯ, ಮಧುಪರ್ಕ ಆದಿಯಿಂದ ಸತ್ಕರಿಸಿ ಸುಸ್ವಾದು ಮಧುರ ದಿವ್ಯ ಪರಮಾನ್ನ ಹಾಗೆಯೇ ಫಲ ಆದಿಗಳಿಂದ ಭೋಜನವನ್ನು ಮಾಡಿಸಿ ದಿವ್ಯ ಜಲವನ್ನು ಪಾನಕ್ಕೋಸ್ಕರ ಕೊಟ್ಟವರಾದರು. ಅನಂತರ ತ್ರಯೋದಶ ಗುಣವಿಶಿಷ್ಟ ದೇವದುರ್ಲಭ ಸುವರ್ಣಪತ್ರವೇಷ್ಟಿತ ತಾಂಬೂಲವನ್ನು ಸಮರ್ಪಿಸಿದರು. ತಿಂದು ಕುಡಿದು ಸಂತುಷ್ಟನಾದ ತರುವಾಯ ಸಂಧ್ಯಾಸಮಯ ಸ್ನಾನಮಾಡಲು ಸುವರ್ಣ ಕಲಶಗಳಲ್ಲಿ ಗಂಗಾಜಲವನ್ನು ತಂದಿಟ್ಟರು; ಹಾಗೆಯೇ ದಿವ್ಯ ತೈಲವನ್ನು ಅವನ ಅಂಗ ಪ್ರತ್ಯಂಗಗಳ ಮೇಲೆ ಹಚ್ಚಿ ತಮ್ಮ ಕಮನೀಯ ಕರಕಮಲಗಳಿಂದ ಅವನನ್ನು ಸ್ನಾನಮಾಡಿಸುವವರಾದರು. ಸಂಧ್ಯಾವಂದನದ ತರುವಾಯ ಸಹಾ ರಾತ್ರಿಯಲ್ಲಿ ಅವನನ್ನು ಉತ್ತಮೋತ್ತಮ ಪದಾರ್ಥಗಳಿಂದ ಸಂತುಷ್ಟಿಗೊಳಿಸಿ ಸುವರ್ಣ ಪಲ್ಲಂಗದ ಮೇಲೆ, ಶರತ್ಕಾಲದ ಕೌಮು

ದಿಯಂತೆ ನುಣುಪಾದ ಬಿಳೀ ವಸ್ತ್ರವನ್ನು ಹಾಸಿಗೆಯ ಮೇಲೆ ಹಾಸಿ, ಹಾಸಿಗೆಯನ್ನು ತಯಾರಿಸಿದವರಾದರು.

ಅಷ್ಟಾವಕ್ರನು ಹಾಸಿಗೆಯ ಮೇಲೆ ಮಲಗಿದೊಡನೆ ಆ ಕನ್ಯೆಯರು ತಮ್ಮ ಕರಕಮಲಗಳಿಂದ ಅವನ ಪಾದಕಮಲಗಳನ್ನು ಮರ್ದಿಸಿ, ಹೀಗೆಂದರು:–"ಮಹಾರಾಜ! ನಾವಿನ್ನು ತಮ್ಮ ಯಾವ ಸೇವೆಯನ್ನು ಮಾಡಲಿ?"

ಆಗ ಅಷ್ಟಾವಕ್ರನು ಹೀಗೆಂದನು:–"ಭಗಿನಿಯರೇ, ನಾನಿಂದು ಸೇವೆಯಿಂದ ಪರಮಪ್ರಸನ್ನನಾದೆನು. ಈಗ ನೀವೆಲ್ಲರೂ ದಯವಿಟ್ಟು ತಮ್ಮ ತಮ್ಮ ಕೋಣೆಗಳನ್ನು ಸೇರಿ ನಿದ್ರಿಸಿರಿ. ಕೇವಲ ವೃದ್ಧ ಮಾತಾಜಿ ಮಾತ್ರ ನನ್ನ ಕೋಣೆಯಲ್ಲಿ ಮಲಗಲಿ!"

ಇದನ್ನು ಕೇಳಿ ಅವರೆಲ್ಲರೂ ಅಲ್ಲಿಂದ ಹೋದರು ಮತ್ತು ಆ ವೃದ್ಧ ಮಾತೆಯು (ಅವರ) ಆ ಕೋಣೆಯಲ್ಲಿ ಬೇರೊಂದು ಪಲ್ಲಂಗದ ಮೇಲೆ ಮಲಗಿದಳು. ಮಧ್ಯರಾತ್ರಿ ಸಮಯ ಚಳಿಗಾಲದ ಶೀತತ್ವದ ಕಾರಣ, ಈ ವೃದ್ಧಸ್ತ್ರೀಯು ಎದ್ದು ಅಷ್ಟಾವಕ್ರನ ಪಲ್ಲಂಗವನ್ನು ಸೇರಿ ಭುಜದ್ವಯದಿಂದ ಅವನನ್ನು ಗಟ್ಟಿಯಾಗಿ ಹಿಡಿದು ತನ್ನ ಎದೆಗೆ ತಾಗಿಸಿ, ಆಲಿಂಗಿಸಿದಳು; ಆದರೆ ಅಷ್ಟಾವಕ್ರನು ಮಾತ್ರ ಕಾಷ್ಠಕಠೋರನು! ಈ ಸ್ಥಿತಿಯನ್ನು ಕಂಡು ಅವನನ್ನು ಉದ್ದೀಪ್ತನನ್ನಾಗಿ ಮಾಡುವ ಚೇಷ್ಟಾತತ್ಪರಳಾದಳು.

ಈ ತಮಾಷೆಯನ್ನು ನೋಡಿ ಮುನಿಯು ಹೀಗೆಂದನು:—"ಭದ್ರೇ! ಇದು ಏನು? ನೀನು ನನ್ನ ಪಲ್ಲಂಗದ ಮೇಲೆ ಯಾಕೆ ಬಂದಿರುವಿ? ಮತ್ತು ನಿನ್ನ ಈ ಚೇಷ್ಟೆಗಳು ಹೇಗೆ ಆಗುತ್ತಲಿವೆ?"

ವೃದ್ಧಸ್ತ್ರೀಯು ಆಗ ಹೀಗೆಂದಳು:—"ರಮಣನೇ, ನಿನ್ನನ್ನು ನೋಡಿ ನನ್ನಲ್ಲಿ ಕಾಮವಾಸನೆಯು ಬಲಿಷ್ಠವಾಗಿದೆ. ಆದುದರಿಂದ ನಿನ್ನೊಡನೆ ರಮಿಸುವುದಕ್ಕೆ ನಾನು ನಿನ್ನ ಪಲ್ಲಂಗವನ್ನು ಸೇರಿದೆನು; ನನ್ನ ಈ ಅಭಿಲಾಷೆಯನ್ನು ನೀನು ತಿರಸ್ಕರಿಸಲಿಕ್ಕಿಲ್ಲವೆಂದು ಭಾವಿಸುತ್ತೇನೆ."

ಅಷ್ಟಾವಕ್ರನು ಹೀಗೆಂದನು:—"ನಾನು ನಿನ್ನನ್ನು ಮಾತೃಸಮಾನಳೆಂದೇ ಭಾವಿಸುತ್ತೇನೆ.. ನಿನ್ನ ಈ ಏಳು ಕುಮಾರಿಯರು ನನ್ನ ಭಗಿನಿಯರು. ಕ್ಷಮೆಯನ್ನು ಯಾಚಿಸುತ್ತೇನೆ. ಪರದಾರಾಭಿಮರ್ಷಸಮಾನ ಪಾಪವು ಸಂಸಾರದಲ್ಲಿ ಬೇರೊಂದು ಇರುವುದಿಲ್ಲ. ನಿನ್ನೊಡನೆ ನಾನು ಈ ಪಾಪವನ್ನು ಎಂದೆಂದಿಗೂ ಮಾಡಲಾರೆನು."

ಇದನ್ನು ಕೇಳಿ ವೃದ್ಧಸ್ತ್ರೀಯು ತನ್ನ ಪಲ್ಲಂಗವನ್ನು ಸೇರಿದಳು.

ರಾತ್ರಿ ಕಳೆದು ಹೋಯಿತು. ಎರಡನೇ ದಿನವು ಬಂತು. ಈ ದಿನ ಸಹ ಮುಂಚಿನಂತೆಯೇ ಸ್ನಾನಾದಿಯಿಂದ ಸಂತುಷ್ಟನನ್ನಾಗಿ ಮಾಡಲ್ಪಟ್ಟವನಾದನು. ರಾತ್ರಿಯಲ್ಲಿ ಅದೇ ಪ್ರಕಾರ ಅಷ್ಟಾವಕ್ರನು ಮಲಗಿದಾಗ ವೃದ್ಧಸ್ತ್ರೀಯು ಮಧ್ಯರಾತ್ರಿಯಲ್ಲಿ ಅವನ ಪಲ್ಲಂಗವನ್ನು ಸೇರಿದಳು. ಈ ತಮಾಷೆಯನ್ನು ನೋಡಿ ಅಷ್ಟಾವಕ್ರನು ಹೀಗೆಂದನು:—"ಭದ್ರೇ! ನಾನು ಪರಸ್ತ್ರೀಯೊಡನೆ ಸಂಭೋಗವನ್ನು ಮಾಡಲು ಅಸಮರ್ಥನು, ಕ್ಷಮಿಸು."

ವೃದ್ಧಸ್ತ್ರೀಯು ಹೀಗೆಂದಳು:—"ಪ್ರಿಯನೆ, ಹೀಗೆ ನಿಷ್ಠೂರನಾಗುವುದು ಏಕೆ? ನಾನು ಯಾರ ಸ್ತ್ರೀಯೂ ಅಲ್ಲ. ನಾನು ಈ ತನಕ ಯಾವ ಪುರುಷರೊಡನೆಯೂ ವಿವಾಹವನ್ನು ಮಾಡಿಕೊಂಡುದಿಲ್ಲ; ಈ ಪ್ರಕಾರವೇ ನಾನು ಅತಿಥಿ-ಅಭ್ಯಾಗತರ ಸಂಗಪ್ರಸಂಗವನ್ನು ಮಾಡಿ ರಮಿಸಿದುದರಿಂದಲೇ ಸರ್ವಸಾಧಾರಣವಾಗಿ ಪರಿಣಮಿಸಿದ್ದೇನೆ. ನಿಮಗೆ ಪರಸ್ತ್ರೀಗಮನದ ಪಾಪವು ಬರಲಾರದು."

ಆಗ ಅಷ್ಟಾವಕ್ರನು ಹೀಗೆಂದನು:—"ನನ್ನ ವಿವಾಹಿತ ಸ್ತ್ರೀಯ ಹೊರತು ಅನ್ಯರೆಲ್ಲರೂ ನನಗೆ ಪರಸ್ತ್ರೀಯರೆಂದು ಕಾಣುತ್ತದೆ. ಏಕೆಂದರೆ, ಇಲ್ಲಿ ಪರಸ್ಯಸ್ತ್ರೀ ಅಂದರೆ ಇನ್ನೊಬ್ಬನ ಸ್ತ್ರೀಯು ಎಂಬ ಷಷ್ಠಿತತ್ಪುರುಷ ಸಮಾಸವನ್ನು ಮಾಡುವದಿಲ್ಲ. ಆದರೆ ಪರಾಚ ಅಸೌಸ್ತ್ರೀ ಎಂಬ ಕರ್ಮಧಾರಯವನ್ನು ಮಾಡುತ್ತೇನೆ. ಅನ್ಯಸ್ತ್ರೀ ಎಂಬ ಅರ್ಥದಲ್ಲಿ ಮಾತ್ರ ಮಾಡುತ್ತೇನೆ." ಇದನ್ನು ಕೇಳಿ ವೃದ್ಧಳಿಗೆ ನಗೆಯು ಬಂತು ಮತ್ತು ತನ್ನನ್ನೇ ೧೬ ವರ್ಷದ ಯುವತಿರೂಪದಲ್ಲಿ ರೂಪಾಂತರಗೊಳಿಸಿ ಹೀಗೆಂದಳು: "ನಾನು ದಿವ್ಯಾಂಗನೆಯಾಗಿದ್ದೇನೆ. ದಿವ್ಯದೇಶದಲ್ಲಿರುತ್ತೇನೆ. ಸ್ವೇಚ್ಛೆಯಿಂದ ವೃದ್ಧಳಾಗಿದ್ದೆನು; ಈಗ ಪುನಃ ಯುವತಿಯಾಗಿದ್ದೇನೆ. ಯಾರೊಡನೆಯೂ ನನ್ನ ಪರಿಣಯವು ಇಂದಿನ ತನಕ ಆಗಿದ್ದಿಲ್ಲ. ನನ್ನನ್ನು ವಿಧಿವಿಧಾನದಿಂದ ಪಾಣಿಗ್ರಹಣಮಾಡಿ, ಆನಂದದಿಂದ ಭೋಗವಿಲಾಸವನ್ನು ಮಾಡಿರಿ. ಇದನ್ನು ನೀವು ಮನ್ನಿಸಲೇಬೇಕಾಗುವುದು."

ಅಷ್ಟಾವಕ್ರನು ಸ್ಮಿತ-ವಿಸ್ಮಿತ-ಚಕಿತನಾದನು. ಹಾಗೆಯೇ ದೃಢಚಿತ್ತನಾಗಿ ಹೀಗೆಂದನು:—"ಎಲೇ ಶೋಭನೆ! ನಾನು ಕ್ಷಮೆಯನ್ನು ಯಾಚಿಸುತ್ತೇನೆ. ಈ ವಚನಗಳಿಂದ ನಾನು ದುಃಖಿತನಾಗಿದ್ದೇನೆ. ಎಂದೆಂದಿಗೂ

ನಾವಿಬ್ಬರು ಸಹಮತರಾಗಲಾರೆವು. ನನ್ನನ್ನು ನನ್ನ ಭಾವೀ ಶ್ವಶುರನು ನಿನ್ನಲ್ಲಿ ಕಳುಹಿಸಿದನು. ನಿನ್ನಂತಹಳ ಸಂಗಡ ಸತ್ವಪರೀಕ್ಷೆಯಲ್ಲಿ ಉತ್ತೀರ್ಣನಾದರೆ ಮಾತ್ರ ನನ್ನ ವಿವಾಹವು ಅವನ ಮಗಳೊಡನೆ ಆಗುವುದು. ಕೃಪಾಪೂರ್ವಕ ನನಗೆ ಉತ್ತೀರ್ಣತಾಸೂಚಕ ಪ್ರಶಂಸಾಪತ್ರವನ್ನು ಕೊಡುವವಳಾಗು. ನಾನು ಮನೆಗೆ ಪುನಃ ಹೋಗಿ ಸುಖಿಯಾಗುವೆನು."

ಇದನ್ನು ಕೇಳಿ ಆ ಸ್ತ್ರೀಯು ಪ್ರಸನ್ನಳಾಗಿ ಹೇಳಿದಳು: "ಶಹಭಾಸ್ ಪುತ್ರನೇ, ನೀನು ಈ ಕಠಿನಪರೀಕ್ಷೆಯಲ್ಲಿ ಅನುತ್ತೀರ್ಣನಾಗಲಿಲ್ಲ; ನೀನು ಧನ್ಯನು! ಹೋಗು, ನೀನು ಧರ್ಮಾನುಕೂಲ ಸುಖಭೋಗವನ್ನು ಹೊಂದು, ಇದೇ ನನ್ನ ಆಶೀರ್ವಾದ. ನಾನು ಉತ್ತರ ದಿಕ್ಕಿನ ದೇವತೆಯಾಗಿದ್ದೇನೆ. ನಿನ್ನ ಸತ್ವಪರೀಕ್ಷೆಗೋಸ್ಕರ ನಾನು ಇಲ್ಲಿಗೆ ಬಂದು ಇದ್ದೆನು."

ಅನಂತರ ಅಷ್ಟಾವಕ್ರನು ಹಿಂದಿರುಗಿ ಮನೆಯನ್ನು ಸೇರಿದನು. ನಿಯಮಶಾನುಕೂಲ ವಿವಾಹವನ್ನು ಮಾಡಿ ಸಮಯವನ್ನು ಕಳೆಯುವವನಾದನು. ಗ್ರಹಸ್ಥಾಶ್ರಮವು ನಿಜವಾಗಿಯೂ ಅವನದು.

ಭಗವನ್! ನಮ್ಮ ದೇಶದ ಪ್ರತಿಯೊರ್ವ ಯುವಕನು ಅಷ್ಟಾವಕ್ರನ ಸಮಾನ ಇಂದ್ರಿಯ ವಿಜಯಿಯಾಗಲಿ!

---

೨. ನಿವೃತ್ತಿ—ನಿರತ

(ಒಂದು ಧಾರ್ಮಿಕ ಕಥೆ)

ಯೇ ತು ಸರ್ವಾಣಿ ಕರ್ಮಾಣಿ । ಮಯಿ ಸನ್ನ್ಯಸ್ಯ ಮತ್ಪರಾಃ ॥
ಅನನ್ಯೇನೈವ ಯೋಗೇನ । ಮಾಂಧ್ಯಾಯಂತ ಉಪಾಸತೆ ॥
ತೇಷಾಮಹಂ ಸಮುದ್ಧರ್ತಾ । ಮೃತ್ಯು ಸಂಸಾರ ಸಾಗರಾತ್ ॥
ಭವಾನಿ ನಚಿರಾತ್ಪಾರ್ಥ । ಮಯ್ಯಾವೇಶಿತ ಚೇತಸಾಮ್ ॥

(ಗೀತೆ: ೧೨, ೬-೭)

(ನನ್ನ ಅಪರಾಧಗಳಿಗೆ ಮಿತಿಯೇ ಇಲ್ಲ.) ಆತನ ಶಬ್ದಗಳು ರೋದನದಲ್ಲಿ ಮುಳುಗಿಹೋಗಿದ್ದುವು. ಮುಖವು ಅರುಣವಾಗಿ ಹೋಗಿತ್ತು, ಮತ್ತು ಪುನಃ ಪುನಃ ಶಿರವನ್ನು ಪೃಥ್ವಿಯ ಮೇಲೆ ಬಡೆಯುತ್ತಿದ್ದನು. ಯಾವಾಗ

ಪಶ್ಚಾತ್ತಾಪದ ಜ್ವಾಲೆಯು ಹೃದಯದ ಕಲ್ಮಶವನ್ನು ಭಸ್ಮಮಾಡತೊಡಗುತ್ತದೋ, ಬಾಹ್ಯವು ಸಂತಪ್ತವಾಗಿ ಹೋಗುತ್ತದೆ. 'ನನ್ನ ಹೆಸರನ್ನು ಕೇಳಿ ನರಕವು ನಡುಗುವುದು! ನಾನು ಶ್ರೀವಿಗ್ರಹದ ರತ್ನಾಲಂಕಾರಗಳನ್ನು ಪರಿಹರಿಸಲು ಬಂದಿದ್ದೆನು!'

ತಿರಸ್ಕಾರದಿಂದ ಶಿಷ್ಯವರ್ಗವು ಮುಖವನ್ನು ತಿರುಗಿಸಿತು. ಯಾರು ಶ್ರೀವಿಗ್ರಹದ ಆಭೂಷಣಗಳನ್ನು ಕದಿಯಲು ಬಂದಿದ್ದನೋ ಆ ಅಧಮನಾದ ತಸ್ಕರನು ಅತನ ದೃಷ್ಟಿಯಲ್ಲಿ ಪರಿತಾಪ ಯಾ ದಂಡದಿಂದ ಶುದ್ಧನಾಗಲಾರನು; ಆಚಾರ್ಯರು ಪುನಃ ಹಸ್ತವನ್ನು ಆ ಲೋಹ ಪುರುಷನ ಮಸ್ತಕದ ಮೇಲೆ ಇಟ್ಟರು. ಅವನು ಮಗುವಿನಂತಹ ಅವರ ಶ್ರೀಚರಣಗಳ ಮೇಲೆ ಬಿದ್ದು ಬಿಕ್ಕಿ ಬಿಕ್ಕಿ ಅಳುತ್ತಿದ್ದನು. 'ವತ್ಸನೇ! ನೀನು ವ್ಯರ್ಥವಾಗಿ ಸಂತಪ್ತನಾಗುತ್ತೀ. ಪ್ರಭುವು ಎಲ್ಲರ ಪರಮ ಪಿತನು. ನೀನೇ ಪಿತನ ಸಂಪತ್ತಿಯನ್ನು ತೆಗೆದುಕೊಳ್ಳುವ ಸಂಕಲ್ಪಮಾಡಿದ್ದರೆ ಏನು ತಪ್ಪಾಯಿತು? ನೀನು ಸರ್ವಾತ್ಮನಾ ಏನೂ ತಿಳಿಯದ ಮಗುವಾಗಿರುವೆ. ನಿನ್ನ ದಯಾಳುವಾದ ಪಿತನೊಡನೆ ಇದಕ್ಕಿಂತ ಬಹು ಅಮೂಲ್ಯವಾದ ರತ್ನಗಳಿವೆ. ಆ ಅಖಿಲೇಶನನ್ನು ಪ್ರಾಪ್ತಮಾಡಿಕೊಳ್ಳುವ ಬದಲು ನೀನು ಕೆಲವು ಕಲ್ಲುಗಳಿಂದ ಸಂತುಷ್ಟನಾಗಲು ಇಚ್ಛಿಸುತ್ತಿರುವೆ."

"ಭಗವಾನ್! ನನಗೆ ಶಾಪಕೊಡಿರಿ! ಅನುಗ್ರಹದ ಈ ಅತೀಮಭಾರವನ್ನು ನನ್ನ ಪ್ರಾಣಗಳು ಸಹಿಸಲಾರವು." ಅವನು ತನ್ನ ಪುಷ್ಟವಾದ, ಸಬಲ ಕೈಗಳಿಂದ ಎರಡೂ ಚರಣಗಳನ್ನು ಹಿಡಿದನು. "ಈ ಅಧಮ ವೆಂಕಟನ ಹೆಸರನ್ನು ತಾವು ಕೇಳಿರಬಹುದು. ಹಿಂಸೆ, ಕಳ್ಳತನ ಮತ್ತು ಅನಾಚಾರ – ಇವುಗಳಿಂದಲೇ ಈ ಪಿಶಾಚಿಯು ರಚಿಸಲ್ಪಟ್ಟಿದ್ದಾನೆ. ಒಬ್ಬಳು ವೇಶ್ಯೆಯನ್ನು ಪ್ರಸನ್ನಗೊಳಿಸಲು ತಮ್ಮ ಶ್ರೀವಿಗ್ರಹದ ಆಭೂಷಣಗಳನ್ನು ಕದಿಯಲು ಬಂದಿದ್ದನು. ಯಾರಾದರೂ ಪ್ರತಿವಿರೋಧಮಾಡಿದ್ದರೆ...." ದೂರದಲ್ಲಿ ಬಿದ್ದ ಖಡ್ಗದ ಕಡೆಗೆ ದೃಷ್ಟಿಯನ್ನು ಬೀರಿದನು. ಅವನು ಮೊದಲೇ ಶಸ್ತ್ರವನ್ನು ಬಿಜ್ಜಿಹಾಕಿದ್ದನು.

"ಸಾಹಸಿ ವೆಂಕಟ!" ಶಿಷ್ಯರು ಭಯಚಕಿತರಾದರು. ಭಯ, ಆಶ್ಚರ್ಯ ತಥಾ ಆಶಂಕೆಗಳಿಂದ ಅವರ ಕಣ್ಣುಗಳು ವಿಸ್ಫಾರಿತವಾದುವು. ಯಾವನ ಆತಂಕದಿಂದ ಇಂದು ರಾಜ್ಯದ ಅಧಿಕಾರಿಗಳು ಕೂಡಾ ವ್ಯವಸ್ಥಿತ

ನಿದ್ರೆಮಾಡುತ್ತಿರಲಿಲ್ಲವೋ ಅವನು ಈ ಪ್ರಕಾರದಿಂದ ಕಾತರನಾಗಿ ಹೋಗಿದ್ದಾನೆ. ತಿರುವಿದ ಹಗ್ಗದಂತೆ, ಸುಘಟಿತವಾದ ಕೃಷ್ಣವರ್ಣದ ಶರೀರ, ಕೆಂಪಾದ ಕಣ್ಣುಗಳು, ರೂಕ್ಷವಾದ ಕೂದಲು ನೋಡುತ್ತಲೇ ಆತಂಕವನ್ನು ಉಂಟುಮಾಡುತ್ತಿದ್ದವು. ಈಗೀಗ ಜಗದ್ಗುರು ಶ್ರೀ ರಾಮಾನುಜಾಚಾರ್ಯ ಪ್ರಭು ಪಾದಗಳ ವಿರೋಧಿಗಳು ಒಂದಲ್ಲ ಒಂದು ಷಡ್ಯಂತ್ರವನ್ನು ರಚಿಸುತ್ತಲೇ ಇದ್ದರು. ಅವರೇ ವೇಶ್ಯೆಯರನ್ನು ಪ್ರೇರೇಪಿಸಿ ವೆಂಕಟನನ್ನು ಶ್ರೀವಿಗ್ರಹದ ಆಭರಣಗಳನ್ನು ತರಲು ಕಳುಹಿಸಿದ್ದರು. ಯಾಕೆಂದರೆ ವೆಂಕಟನನ್ನು ಮಹಾಪ್ರಭುಗಳು ಅಗತ್ಯವಾಗಿ ತಡೆಯುವರು. ಆಗ ವೆಂಕಟನ ಶಸ್ತ್ರ ವಿರೋಧಿಗಳ ಆಸೆಯು ಈಡೇರುವುದು.

“ಜಗತ್ತಿಗೆ ಕಲ್ಯಾಣವಾಗಲಿ!” ವೆಂಕಟನು ಪ್ರಭುಪಾದಗಳಿಗೆರಗಿ ಪ್ರಾರ್ಥಿಸಿದನು. ತೇಜೋಮಯವಾದ ಮೂರ್ತಿ, ಅಪರಿಮಿತ ನಯವಾದ ಕಂಠಸ್ವರ ಮತ್ತು ಸಂಪೂರ್ಣ ವಿಶ್ವದ ಮಂಗಲ ಕಾಮನೆಗಾಗಿ ಈ ದಿವ್ಯ ಪುರುಷಸಾಹಸಿಗೆ ತನ್ನ ನಾಡಿಗಳಲ್ಲಿ ರಕ್ತವು ಹೆಪ್ಪುಗಟ್ಟಿದಂತೆ ಭಾಸವಾಯಿತು. ಅವನು ಶಸ್ತ್ರಗಳನ್ನು ಬಿಸುಟಿ ಓಡಿಹೋಗಿ ಆ ಮಹಾಮಹಿಮನ ದಿವ್ಯಚರಣಗಳ ಮೇಲೆ ಬಿದ್ದನು.

“ನಾನು ನಿನ್ನ ಹೆಸರನ್ನು ಕೇಳಿರುವೆನು” ಆಚಾರ್ಯರ ಕಂಠಸ್ವರವು ಸ್ನೇಹಸ್ನಿಗ್ಧವಾಗಿತ್ತು. “ನೀನು ಇಷ್ಟು ಕಾತರನಾಗುತ್ತಿಯೇಕೆಂದು ನನಗೆ ತಿಳಿಯುವುದಿಲ್ಲ ಶ್ರೀ ರಂಗನಾಥನಿಗೆ ಕರುಣೆಯು ಅಪಾರವಾಗಿದೆ; ಅವನ ಸಮ್ಮುಖದಲ್ಲಿ ಎಲ್ಲರೂ ಸಮಾನರಾದ ಶಿಶುಗಳಾಗಿದ್ದಾರೆ. ಆ ದಯಾಮಯನ ದೃಷ್ಟಿಯಲ್ಲಿ ಅಪರಾಧವು ಯಾವ ವಸ್ತುವೂ ಆಗಿಲ್ಲ. ನೀನು ನಿನ್ನನ್ನು ಅವನ ಚರಣಗಳಲ್ಲಿ ಅರ್ಪಿಸಿಕೊಳ್ಳು! ಅವನು ನಿನ್ನನ್ನು ಸ್ವೀಕರಿಸುವನು.”

ವೆಂಕಟನು ಈಗ ಸಾಹಸಿಗನಾಗಿಲ್ಲ—ಮಹಾಪುರುಷನ ಕೃಪೆಯಿಂದ ಅವನು ಪರಿಪೂರ್ಣನಾಗಿದ್ದಾನೆ ವ್ಯಸನಿಯ ಹತ್ತಿರ ಸಂಪತ್ತು ಇರುವುದಿಲ್ಲ. ಹಣವಿಲ್ಲದಿದ್ದರಿಂದ ಸಂಗಡಿಗರು ದೂರವಾದರು; ಗೋದಾವರಿಯ ಪವಿತ್ರವಾದ ತಟದಲ್ಲಿ ಅವನು ಗುಡಿಸಲನ್ನು ಕಟ್ಟಿದನು ಮತ್ತು ಅಲ್ಲಿಯೇ ಗುರುದೇವನ ಮುಖಾಂತರ ಪಡೆದ ಶ್ರೀವಿಗ್ರಹವನ್ನು ಸ್ಥಾಪಿಸಿದನು.

ಮನೆಯಲ್ಲಿ ಮಾತೆಯ ವಿನಹ ಮತ್ತಾರೂ ಇರಲಿಲ್ಲ. ಆ ವೃದ್ಧೆಗೆ ಪುತ್ರನ ಈ ಉಗ್ರಕೃತ್ಯಗಳಿಂದ ಬಹಳ ದುಃಖವುಂಟಾಗುತ್ತಿತ್ತು. ಒಂದಾನೊಂದುದಿನ ರಾಜಭಟರು ವೆಂಕಟನಿಗೆ ಶೂಲಕ್ಕೇರಿಸುವುದು ಖಂಡಿತವೆಂದು ಆಕೆ ಯಾವಾಗಲೂ ಹೆದರಿಕೊಂಡೇ ಇರುತಿದ್ದಳು. ಪುತ್ರನ ಪರಿವರ್ತನೆಯನ್ನು ಕಂಡು ಮಾತೆಗೆ ಅತ್ಯಾನಂದವಾಯಿತು. ಅವಳೂ ಪುತ್ರನೊಂದಿಗೆ ವಾಸಿಸತೊಡಗಿದಳು.

ಭಗವಂತನಿಗೆ ಪ್ರಸಾದವನ್ನು ನಿವೇದಿಸಲು ವೆಂಕಟನು ಸ್ವಲ್ಪ ಭೂಮಿಯನ್ನು ಸ್ವಚ್ಛಪಡಿಸಿ ಕೃಷಿಮಾಡಲು ಯೋಗ್ಯವನ್ನಾಗಿ ಮಾಡಿದನು. ಬಹಳ ಕಷ್ಟಪಟ್ಟು ಅವನು ಅದರಲ್ಲಿ ಅನ್ನೋತ್ಪಾದನೆಯನ್ನು ಮಾಡುತ್ತಿದ್ದನು. ಗುಡಿಸಲಿನ ಹಿಂದೆ ಕೆಲವು ಫಲವೃಕ್ಷಗಳನ್ನು ಬೆಳಸಿದ್ದನು ಮತ್ತು ತುಲಸಿಯನ್ನೂ ಪುಷ್ಪಗಳ ಚಿಕ್ಕದಾದ ಪುಷ್ಪವಾಟಿಕೆಯನ್ನೂ ಎದುರುಗಡೆ ತಯಾರಿಸಿದ್ದನು; ಇದರಿಂದ ಈ ಗುಡಿಸಲು ಒಂದು ಆಶ್ರಮದಂತೆ ಕಂಡುಬರುತ್ತಿತ್ತು.

ಇಂದು ಏಕಾದಶಿಯಾಗಿರುವುದು; ಇಂದು ಗೋಕುಲಾಷ್ಟಮಿಯಾಗಿರುವುದು ಎಂದು ಹೇಳಿ ಪ್ರತಿ ಒಂದು ಹಬ್ಬ, ವ್ರತ ಉಪಾಸನೆಗಳು ಬಹಳ ಉತ್ಸಾಹದಿಂದ ಆಚರಿಸಲ್ಪಡುತಿದ್ದವು. ಮಾವನ ಪುತ್ರರಿಗೆ ಪುಷ್ಪಗಳನ್ನು ಬೆಳೆಸುವುದು, ನೀರೆರೆಯುವುದು, ಪ್ರಸಾದವನ್ನು ತಯಾರಿಸುವುದು ಈ ಕೆಲಸಗಳಿಂದಾಗಿ ಬಿಡುವೇ ಇರಲಿಲ್ಲ. ಅವರು ಶ್ರೀಹರಿಯ ನಾಮಕೀರ್ತನೆಯನ್ನು ಯಾವಾಗಲೂ ಹಾಡುತ್ತಿದ್ದು ಪೂಜೆಗಳ ಉಪಕರಣಗಳನ್ನು ಸಜ್ಜುಗೊಳಿಸುತ್ತಿದ್ದರು. ಕೃಷಿ, ಸ್ನಾನ, ಭೋಜನ ಎಲ್ಲವನ್ನೂ ಪೂಜೆಗಾಗಿಯೇ ಮಾಡುತ್ತಿದ್ದರು.

ಪ್ರಾಯಶಃವಾಗಿ ಸಂತರು ಬರುತ್ತಿದ್ದರು. ಮಹಾತ್ಮರು ಕೂಡಾ ವಿಶುದ್ಧ ಅನ್ನವನ್ನು ಅನ್ವೇಷಿಸುತ್ತಾರೆ. ವೆಂಕಟನು ಇವರೆಲ್ಲರನ್ನು ಉನ್ಮುಕ್ತ ಹೃದಯದಿಂದ ಎದುರುಗೊಳ್ಳುತ್ತಿದ್ದನು. ಕಥೆ, ಕೀರ್ತನೆ, ಭಗವದ್ಗುಣಾನುವಾದನಗಳಿಂದ ಸಮೀಪದ ಗ್ರಾಮವಾಸಿಗಳೂ ತಮ್ಮ ಕಿವಿಯನ್ನು ತೃಪ್ತಿಗೊಳಿಸುತ್ತಿದ್ದರು. ಯಾವನ ಹೆದರಿಕೆಯಿಂದ ಎಲ್ಲರೂ ದ್ವಾರಗಳನ್ನು ಮುಚ್ಚುತ್ತಿದ್ದರೊ ಇಂದು ಅವನ ಸ್ವಾಗತಕ್ಕಾಗಿ ಪ್ರತಿಯೊಂದು ದ್ವಾರವೂ ತೆರೆದುಕೊಂಡಿರುತ್ತಿತ್ತು. ಆದರೆ, ವೆಂಕಟನಿಗೆ ತನ್ನ

ಅರ್ಚನೆಯನ್ನು ಮುಗಿಸಿ ಇವರ ಅನುರೋಧವನ್ನು ಒಪ್ಪಲು ಸಮಯವೇ ಸಿಗುತ್ತಿರಲಿಲ್ಲ.

"ಮಗನೇ! ಮಳೆಯ ನೀರು ಗದ್ದೆಗಳಿಂದ ಹರಿದು ಹೋಗುವುದು, ಅಂಚನ್ನು ಕಟ್ಟಲು ಹೋಗುವುದಿಲ್ಲವೇ?" ವೃದ್ಧೆಯಾದ ಮಾತೆಯು ತುಂಬ ಹೊತ್ತು ಪ್ರತೀಕ್ಷಿಸಿ ಪುತ್ರನೊಡನೆ ಹೇಳಿದಳು.

"ಭಗವಂತನನ್ನು ಮಲಗಿಸಿ ಹೋಗುತ್ತೇನೆ" ಎಂದು ವೆಂಕಟನು ಆರತಿಯನ್ನು ಎತ್ತಿದನು. ಅದರಲ್ಲಿ ತುಪ್ಪವು ಮುಗಿದು ಜ್ಯೋತಿಯು ಎಂದು ನಂದೀತೆಂದು ಅವನಿಗೆ ತಿಳಿಯಲೇ ಇಲ್ಲ. ಹೊರಗೆ ಭಯಂಕರ ಮುಸಲಧಾರೆಯಿಂದ ವೃಷ್ಟಿಯಾಗುತಿತ್ತು. ಹನಿಗಳ ಶಬ್ದದಲ್ಲಿ ಒಂದು ಅವ್ಯಕ್ತ ನಾಮ—ಧ್ವನಿಯು ಕೇಳತೊಡಗಿತು. ಅವನು ಅದರಲ್ಲಿಯೇ ತಲ್ಲೀನನಾಹನು. ಮಳೆಯು ನಿಂತಿತು; ನಡುರಾತ್ರಿಯಾಗಿತ್ತು. ಈಗ ಅವನ ಆರತಿಯು ಮುಗಿಯಿತು; ಇನ್ನೂ ಸ್ತವನವು ಬಾಕಿಯಿದೆ, ಆ ಮೇಲೆ ಭಗವಂತನು ಮಲಗುವನು.

ಏನಾಯಿತು? ಹುಡುಗನು ಏಕೆ ಹಿಂದಿರುಗಲಿಲ್ಲ? ಮುದುಕಿಯು ಕಡೆಗೆ ದೀಪವನ್ನು ಹೊತ್ತಿಸಿದಳು. ನೆಲವು ಕೆಸರಿನಿಂದ ತುಂಬಿಕೊಂಡಿತ್ತು. ಕಪ್ಪೆಗಳ ಅಖಂಡನಾದವನ್ನು ಕೇಳಿ ಕಿವಿಗಳು ಅದನ್ನು ಅಭ್ಯಸಿಸಿದ್ದವು. ಅಲ್ಲಲ್ಲಿ ತೋಡುಗಳಿಂದ ನೀರು ಹರಿಯುತ್ತಿತ್ತು. ವೃದ್ಧೆಯು ವೆಂಕಟನನ್ನು ಕೂಗುತ್ತ ತಿರುಗುತ್ತಿದ್ದಳು; ಅನೇಕ ಗಂಟೆಗಳು ಕಳೆದರೂ ಆಕೆಯ ಪುತ್ರನು ಆ ಅಂಧಕಾರದಿಂದ ತುಂಬಿದ ರಾತ್ರಿಯಲ್ಲಿ ಹೋದವನು ಹಿಂದಿರುಗಿರಲಿಲ್ಲ. ಈ ದಿನಗಳಲ್ಲಿ ವೆಂಕಟನು ತೀರ ಹುಚ್ಚನಾಗಿ ಹೋಗಿದ್ದನು. ಎಲ್ಲಿ ನಿಲ್ಲುತ್ತಾನೋ ಅಲ್ಲಿ ಸುಮ್ಮನೆ ನಿಂತಕೊಂಡು ಎಲ್ಲಿಯಾದರೂ ನೋಡುತ್ತಾ ನಿಂತಿರುತ್ತಾನೆ.

"ಅಮ್ಮಾ! ಇಷ್ಟು ರಾತ್ರೆ ನೀನು ಇಲ್ಲಿ ಹೇಗೆ?' ಮುದುಕಿಯು ಹತ್ತಿರ ಬಂದು ಅವನ ಭುಜದ ಮೇಲೆ ಕೈ ಇಡುತ್ತಲೇ ಅವನು ಆಶ್ಚರ್ಯಚಕಿತನಾದನು. ಗದ್ದೆಯ ನೀರು ಬದಿಯ ತೋಡಿನಿಂದ ಹರಿದುಹೋಗುತ್ತಿತ್ತು. ಅವನು ಮೊದಲೇ ಸ್ವಲ್ಪ ಮಣ್ಣನ್ನು ಹಾಕಿರಬೇಕು. ಆ ಮಣ್ಣಿನ ಒಂದು ಚಿಕ್ಕ ಅಂಶವು ಪ್ರವಾಹದೊಂದಿಗೆ ಕಡಿಮೆಯಾಗುತ್ತಾ ಬರುತ್ತಿತ್ತು. ಅವನು

ಏನೋ ಆಲೋಚಿಸಿ ಅಲ್ಲಿಯೇ ನಿಂತುಕೊಂಡಿದ್ದನು. "ನೀನೇನು ಮಾಡುತ್ತಿರುವೆ?" ಮಾತೆಯು ಸ್ನೇಹದಿಂದ ಗದರಿಸಿದಳು.

"ನಡೆ, ಮನೆಗೆ ಹೋಗುವ!" ಬೇಗ ಬೇಗನೆ ಕೈಯಿಂದ ನೀರನ್ನು ತಡೆದು ಮಣ್ಣನ್ನು ಹಾಕಿದನು. ಕಾಲಿನಿಂದ ಹೊಸ ಮಣ್ಣನ್ನು ತುಳಿದು ಗಟ್ಟಿಮಾಡಿದನು. ಅವನು ಗದ್ದೆಯಲ್ಲಿ ಕೈಕಾಲು ತೊಳೆದು ತಾಯಿಯೊಂದಿಗೆ ಮನೆಗೆ ಹಿಂದಿರುಗಿದನು.

ಈ ಪ್ರಕಾರವಾಗಿ ಕೃಷಿಯು ಸಾಗುತ್ತಿತ್ತು. ಪ್ರಾತಃ ಪೂಜೆಗಾಗಿ ಕುಳಿತರೆ ಮಧ್ಯಾಹ್ನದ ತನಕ ಪೂಜೆಯಾಗುವುದು. ಆ ಮೇಲೆ ಸೂರ್ಯಾಸ್ತದ ಮೊದಲೇ ಪುನಃ ಸ್ನಾನಮಾಡಬೇಕು. ವಿವಶನಾಗಿ ಎತ್ತುಗಳನ್ನು ನೆರೆಕರೆಯವನಿಗೆ ಕೊಟ್ಟುಬಿಟ್ಟನು. ಬ್ರಾಹ್ಮಣನಿಗೆ ಯಾರೂ ಎರಡು ರೊಟ್ಟಿಗಳನ್ನು ಮಾಡುವಷ್ಟು ಹಿಟ್ಟನ್ನು ಕೊಡುವರು. ಹೊಟ್ಟೆಗಾಗಿ ಪೂಜೆ, ಅರ್ಚನೆಗಳಲ್ಲಿ ವ್ಯಾಘಾತವಾಗುತ್ತದೆ. ಇದನ್ನು ಸಹಿಸಲಾಗುವುದಿಲ್ಲ ಕೃಷಿಯನ್ನು ಬಿಟ್ಟುಬಿಡುವದರಿಂದ ಪೂಜೆಗೆ ಬೇಕಾದ ಅವಕಾಶವು ಸಿಕ್ಕಿತು.

ಮಾತೆಯು ನಿಶ್ಚಿಂತಳಾಗುವಳು. ಇನ್ನು ಪುತ್ರನು ಮನೆಯಲ್ಲೇ ವಾಸಿಸುವನು, ಅವನು ನಿಶ್ಚಿಂತತೆಯಿಂದ ಇರುವದನ್ನು ನೋಡಿ ಅವನೆಲ್ಲಿಯಾದರೂ ಹೊರಗೆ ಹೋದರೆ ಅವನು ಬರುವ ವರೆಗೆ ತಾಯಿಯು ವ್ಯಾಕುಲಳಾಗಿ ಕಾದುಕೊಂಡಿರುತ್ತಿದ್ದಳು.

"ಎಲಾ, ಪ್ರಭುವಿಗೆ ಸ್ನಾನಮಾಡಿಸಬೇಕಲ್ಲವೇ?" ವೆಂಕಟನು ಸುಂದರವಾದ ಪುಷ್ಪಹಾರವನ್ನು ನೋಡಿ, ದೇವರಿಗೆ ಹಾಕಲು ಎತ್ತಿಕೊಂಡನು. "ಇನ್ನೂ ಪ್ರಭುವು ಸ್ನಾನಮಾಡಲಿಲ್ಲ, ನಿರ್ಮಾಲ್ಯವನ್ನು ಕೂಡ ಇಳಿಸಲಿಲ್ಲ." ವೃದ್ಧೆಗೆ ಚಿಂತೆ ತೊಡಗಿದೆ; ಬಹುಶಃ ವೆಂಕಟನಿಗೆ ಏನೋ ರೋಗವಾಗಿರಬೇಕು. ಅವನಿಗೆ ತನ್ನ ವಸ್ತ್ರಗಳ, ಭೋಜನದ ಯಾವುದರ ಅರಿವೂ ಇಲ್ಲವಾಗಿದೆ: ಪೂಜೆಯನ್ನು ಕೂಡ ಅವನು ಈಗ ಯಥಾವಿಧಿಯಾಗಿ ಮಾಡುವುದಿಲ್ಲ.

"ಅಮ್ಮಾ, ನೀನೆ ಈಗ ಪೂಜೆಮಾಡು" ಎಂದು ಲಜ್ಜಿತನಾಗಿ ಅವನು ಮಾಲೆಯನ್ನು ಕೆಳಗಿಟ್ಟನು; ವೃದ್ಧಳಾದ ಮಾತೆಯೇ ಈ ಪುಷ್ಪಮಾಲೆಯನ್ನು ಮಾಡುತ್ತಾಳೆ; ಇನ್ನು ಪೂಜೆಯನ್ನೂ ಅವಳೇ ಮಾಡಬೇಕು.

ದೇವರು ಅವಳ ಮಗನಿಗೆ ಆರೋಗ್ಯವನ್ನು ನೀಡಲಿ; ಕೆಲಸವನ್ನು ಅವಳು ಎಷ್ಟು ಬೇಕಾದರೂ ಮಾಡಬಲ್ಲಳು.

ಪೂಜೆಯೂ ನಿಂತಿತು. ಈಗ ಅವನು ದೇವರ ಮುಂದೆ ಸುಮ್ಮನೆ ಕುಳ್ಳಿರುತ್ತಾನೆ. ಮೂರ್ತಿಯನ್ನೇ ನಿರೀಕ್ಷಿಸುತ್ತಾನೆ. ಆಗಾಗ ರೋದಿಸುತ್ತಾನೆ. ಮಾತೆಯು ಪ್ರಸಾದವನ್ನು ಸ್ವೀಕರಿಸಲು ಹೇಳಿದಾಗ ಎದ್ದು ತೆಗೆದುಕೊಳ್ಳುತ್ತಾನೆ. ನಿತ್ಯವೂ ಬೆಳಗಾತ ತಾಯಿಯು ಅವನನ್ನು ಸ್ನಾನಕ್ಕೆ ಕರೆಯುದಿದ್ದರೆ ಅವನು ಹಾಗೆಯೇ ಹೋಗಿ ದೇವರ ಮುಂದೆ ಕುಳಿತುಕೊಳ್ಳುತ್ತಾನೆ. ರಾತ್ರಿ ಪ್ರಭುವು ಶಯನಮಾಡಿದ ಮೇಲೆ ಸುಮ್ಮನೆ ಹೋಗಿ ತನ್ನ ಆಸನದ ಮೇಲೆ ಬಿದ್ದುಕೊಳ್ಳುತ್ತಾನೆ.

ಈಗಲೂ ಉತ್ಸವಗಳು ನಡೆಯುತ್ತವೆ, ಅತಿಥಿಗಳು ಬರುತ್ತಾರೆ. ಎಲ್ಲರ ಸತ್ಕಾರಕ್ಕಾಗಿ ಶ್ರದ್ಧೆಯುಳ್ಳವರು ಸಾಮಾಗ್ರಿಯನ್ನೂ ಕೊಡುತ್ತಾರೆ. ಎಲ್ಲವೂ ನಡೆಯುತ್ತದೆ; ಆದರೆ ವೃದ್ಧೆಗೆ ಶಾಂತಿಯಿಲ್ಲ. ಅವಳ ಪುತ್ರನು ಏನನ್ನೂ ಮಾಡದೆ ಯಾವಾಗಲೂ ದೇವರ ಮುಂದೆ ಸುಮ್ಮನೆ ಕುಳಿತುಕೊಳ್ಳುವುದರಿಂದ ಅವಳು ಮನೆಗೆ ಬಂದ ಪ್ರತಿ ಒಬ್ಬ ಸಂತನೊಡನೆ ಅಳುತ್ತ, ತನ್ನ ಪುತ್ರನ ಈ ಉದಾಸೀನತೆಯನ್ನು ಹೋಗಲಾಡಿಸಲೇಬೇಕೆಂದು ಪ್ರಾರ್ಥಿಸುತ್ತಿದ್ದಳು. ಆಗ "ನಿನ್ನ ಮಗನ ಸ್ಥಿತಿಯು ಚೆನ್ನಾಗಿರುವದೆ"ಂದು ಅವರು ಹೇಳಿದರೆ ಅವಳಿಗೆ ಆಶ್ಚರ್ಯವೂ ರೋಷವೂ ಉಂಟಾಗುತ್ತಿತ್ತು.

ವೆಂಕಟನ ಉದಾಸೀನತೆ ಹೆಚ್ಚಾಗುತ್ತಾ ಹೋಗುತ್ತಿತ್ತು. ಈಗೀಗ ಅವನಿಗೆ ಸ್ನಾನ, ಭೋಜನ, ಶಯನಾದಿಗಳಿಗೆ ಮಾತೆಯು ಕೈಹಿಡಿದು ಎಬ್ಬಿಸಬೇಕು. ಅವನು ಸ್ನಾನಮಾಡುತ್ತ ಮಾಡುತ್ತ ನಿಂತುಬಿಡುತ್ತಿದ್ದನು. ಊಟಮಾಡುತ್ತಾ ಮಾಡುತ್ತಾ ಕೈಯನ್ನು ನಿಲ್ಲಿಸಿ ಏನೋ ಗೂಢವಾದ ಚಿಂತೆಯಲ್ಲಿ ತೊಡಗುತ್ತಿದ್ದನು. ಮಾತೆಯು ಅವನಿಗೆ ಜಾಗೃತಿಯನ್ನು ಹುಟ್ಟಿಸುತ್ತಿದ್ದಳು. ವೈದ್ಯರು ಇವನ ರೋಗವೇನೆಂದು ಹೇಳಲು ಅಸಮರ್ಥರಾದರು. ತಾಯಿಯ ಚಿಂತೆಯು ಹೆಚ್ಚಿತು.

"ಋತೆ ಜ್ಞಾನಾನ್ನಮುಕ್ತಿಃ" ಶ್ರುತಿಯ ಈ ಉದ್ಧರಣೆ ಕೊಟ್ಟು ಪಂಡಿತರು ಮುಗುಳುನಕ್ಕರು: ಶ್ರುತಿಯನ್ನು ಸ್ವೀಕರಿಸದಿರಲು ಯಾರಿಗೆ ಸಾಹಸವಿದೆ? ಇನ್ನು ಯಾರಿಗೂ ಏನು ಮಾಡಲೂ ಉಳಿಯಲಿಲ್ಲವೆಂದು

ಅವರು ನಿಶ್ಚಯಿಸಿದ್ದರು. ಒಂದು ಬಾರಿ ಗರ್ವದಿಂದ ಎಲ್ಲರ ಕಡೆಗೂ ನೋಡಿ ಅವರು ಹಿಂದೆ ತಿರುಗಿದರು; ಅವರ ಶಿಷ್ಯರು ತಮ್ಮ ಆಚಾರ್ಯ ರನ್ನು ಆದರ, ಪ್ರಶಂಸಾಪೂರ್ವಕ ದೃಷ್ಟಿಯಿಂದ ನೋಡಿ ತಲೆತಗ್ಗಿಸಿದರು.

ಅಜ್ಞಾನದಿಂದ ಬಂಧನವಾಗುವಾಗ ಜ್ಞಾನದಿಂದ ಮುಕ್ತಿಯು ಆಗಿ ಯೇ ಆಗುವುದು. ಭಗವಾನ್ ರಾಮಾನುಜರ ಮೇಲೆ ಯಾವ ಪ್ರಭಾವವೂ ಬಿದ್ದಿರಲಿಲ್ಲ. ಶ್ರುತಿವಚನಗಳಲ್ಲಿ ಅಪಾರ ಶ್ರದ್ಧೆಯ ಆದರ್ಶವನ್ನು ಅವರಲ್ಲದೆ ಇನ್ನ್ಯಾರೂ ಸ್ಥಾಪಿಸಲಾರರು. ಅವರು ಶ್ರುತಿಯನ್ನು ಸ್ಪಷ್ಟ ಗೊಳಿಸಿದರು. ಜ್ಞಾನದ ಅರ್ಥವು ಶಬ್ದವಿಶೇಷ ಅಥವಾ ಭಾವವಿಶೇಷವಲ್ಲ. ಏಕೆಂದರೆ ಶ್ರುತಿಯು ಮೂಲಕ ಪರಮತತ್ವ 'ನೇತಿ-ನೇತಿ' ಎಂದು ಹೇಳಿ ಪ್ರತಿಪಾದಿತವಾಗಿದೆ. ▪ ಶಬ್ದ ಮತ್ತು ಭಾವದ ವಿಷಯವಾಗಲಾರದು. ಆ ಚಿನ್ಮಯ ನಿರ್ಗುಣ ನಿರಾಕಾರ ಯಾ ಸರ್ವ ಸದ್ಗುಣೈಕಧಾಮನಾದ ಕ್ಷೀರಸಾಗರಶಾಯಿಯೇ ಜ್ಞಾನಘನನಾಗಿದ್ದಾನೆ. ಅವನ ಶ್ರೀ ಚರಣಗಳ ಪ್ರಾಪ್ತಿಯು ವಿನಹ ಮುಕ್ತಿಯನ್ನು ಹೊಂದಲಾಗುವುದಿಲ್ಲ.

ಆರೆ, ಹಾಗಾದರೆ ಶ್ರವಣ, ಮನನ, ತಥಾ ನಿದಿಧ್ಯಾಸದ ಮೂಲಕ ಆವರಣದ ನಿವೃತ್ತಿಯಾದ ಮೇಲೆ ಸ್ವರೂಪದ ಬೋಧವಾಗುವದಿಲ್ಲ ಎಂದು ನಿಮ್ಮ ಹೇಳಿಕೆಯಲ್ಲವೇ? ತನ್ನ ಇಚ್ಛೆಗೆ ವಿರುದ್ಧವಾಗಿ ಪಂಡಿತರಿಗೆ ಉತ್ತರ ಸಿಕ್ಕಿದ್ದರಿಂದ ಕ್ಷೋಭವು ಅವರ ಸ್ವರವನ್ನು ತೀವ್ರಗೊಳಿಸಿತು. ತಮ್ಮ ಆಸನದಲ್ಲಿ ಸ್ಥಿರವಾಗಿರುವ ಪ್ರಯತ್ನವನ್ನು ಅವರು ಮಾಡತೊಡಗಿದ್ದರು. 'ಮಹರ್ಷಿ ಪಂತಜಿಯ ನಿರ್ವಿಕಲ್ಪ ಸಮಾಧಿಯು ಕೂಡ ಜ್ಞಾನದಾತ್ರಿ ಯಾಗಿ ಮುಕ್ತಿಯು ಸಿಗುತ್ತದೊ?'

"ಸಗುಣ ಮತ್ತು ನಿರ್ಗುಣವು ಪರಸ್ಪರ ತತ್ವಗಳ ಸ್ವರೂಪವಾಗಿದೆ. ಸಾಯುಜ್ಯ ಮತ್ತು ಕೈವಲ್ಯವೂ ಮೋಕ್ಷದ ಸ್ವರೂಪಗಳಾಗಿವೆ. ಯೋ ಗಿಯು ಚಿತ್ತವೃತ್ತಿಗಳನ್ನು ವಿರೋಧಿಸುತ್ತಾನೆ. ಯಾವಾಗ ಮನಸ್ಸು ಅಂತರದಲ್ಲಿಯ ಸೌಂದರ್ಯವನ್ನು ತಿಳಿದುಕೊಳ್ಳುತ್ತದೋ ಆಗ ಮಾಯಾ ಪದಾರ್ಥಗಳ ಕಡೆಗೆ ನೋಡುವದೇ ಇಲ್ಲ. ಮೃತ್ಯು, ಜಗತ್ತು, ಅಜ್ಞಾನ, ಮಾಯೆ—ಇವುಗಳೊಂದೂ ಇರುವುದಿಲ್ಲ. ದೇವರು ಅವನಲ್ಲಿ ಬಂದು ಕೂಡುವಾಗ ಅವನ ಎಲ್ಲಾ ಅಜ್ಞಾನವು ಧ್ವಂಸವಾಗುತ್ತದೆ. ಅವನು ಆರಾಧಕನನ್ನು ಈ ಜನನ-ಮರಣವೆಂಬ ಚಕ್ರದಿಂದ ಸ್ವತಃ ಮೇಲೆತ್ತು

ತ್ತಾನೆ. ನಾನು ಕಾಂಚಿಯಾತ್ರೆಗೆ ಹೊರಡುವನಿದ್ದೇನೆ. ನೀವೂ ನಮ್ಮೊಂದಿಗೆ ಹೊರಟರೆ ಭಗವತಿ ಗೋದಾವರಿಯು ಪ್ರಸಾದದಿಂದ ನಾವೆಲ್ಲರೂ ಕೃತಾರ್ಥರಾಗುವೆವು."

"ಯಾರಾದರೂ ಶ್ರೀಮಂತ ಭಕ್ತರು ಸಿಕ್ಕಿದ್ದಾರೋ?" ಪಂಡಿತರು ತನ್ನ ದೃಷ್ಟಿಯಿಂದಲೇ ವಿಶ್ವವನ್ನು ನೋಡಿದರು.

"ತಾವೇನೂ ಚಿಂತಿಸಬೇಡಿ. ವೆಂಕಟನ ಐಶ್ವರ್ಯವು ಅಪಾರವಾಗಿರುವುದು, ತಮ್ಮ ಸೇವೆಯಲ್ಲಿ ಏನೂ ಕಮ್ಮಿಯಾಗಲಾರದು."

"ಅರೆ ನನ್ನ ಮಗು!" ವೃದ್ಧೆಯಾದ ತಾಯಿಯು ಮೂರು ದಿನಗಳಿಂದ ಗ್ರಾಮದಲ್ಲಿ ಅಳುತ್ತಾ ತಿರುಗಾಡುತ್ತಿರುವಳು. ಅವಳ ಮಗನನ್ನು ಸಮಾಧಾನಪಡಿಸುವವರು ಯಾರೂ ಇಲ್ಲ. ಅವನು ಏಳುವದೇ ಇಲ್ಲ. ಕೂತಲ್ಲಿಯೇ ಇರುವನು. ಆಗಾಗ ಬಿಕ್ಕಿ ಬಿಕ್ಕಿ ಅಳುತ್ತಾನೆ, ಉಚ್ಚಸ್ವರದಲ್ಲಿ ನಗುತ್ತಾನೆ. ಜನರು ಸಾಕಷ್ಟು ಉಪಚಾರವನ್ನು ನಡೆಸಿದರು. ಏನೂ ಪ್ರಯೋಜನವಾಗಲಿಲ್ಲ. ಆ ಗುಡಿಸಲಿನಲ್ಲಿ ಈಗ ದುಃಖಿನಿಯಾದ ಮುದುಕಿಮಾತೆಯು ವಿನಹ ಯಾರೂ ಇಲ್ಲ.

ಫಕ್ಕನೆ ಏನೋ ನೆನಪಾಯಿತು. ದೇವರ ಪೂಜೆಯನ್ನು ಯಥಾಸಾಂಗವಾಗಿ ನೆರವೇರಿಸಿ ಶ್ರೀ ವಿಗ್ರಹದ ಮುಂದೆ ಮೂರ್ಛಿತಳಾಗಿ ಬಿದ್ದಳು.

ಮೂರ್ಛೆ ತಿಳಿದೇಳುವಾಗ ಭಗವನ್ನಾಮದ ಪರಿಚಿತ ಉಚ್ಚಧ್ವನಿಯು ಕೇಳಿಬಂತು. ವೃದ್ಧೆಯು ಹೊರಗೆ ಓಡಿದಳು.

"ವೆಂಕಟನೆಲ್ಲಿ?" ಮಹಾಪ್ರಭುವು ವೃದ್ಧೆಗೆ ಆಶ್ವಾಸನ ಕೊಡುತ್ತಾ ಹೇಳಿದರು. ಸಂಗಡ ಬಂದ ಪಂಡಿತರು, ಇವತ್ತು ಯಾವ ಕಳವಳದಲ್ಲಿ ಮಧ್ಯಾಹ್ನವನ್ನು ಕಳೆಯಬೇಕಾಗುತ್ತದೋ ಎಂದು ನಿರಾಶರಾಗಿದ್ದರು.

"ಅವನು ಹುಚ್ಚನಾಗಿರುವನ.!" ಅಳುತ್ತಾ ವೃದ್ಧೆಯು ಮನೆಯೊಳಗಿನ ಕಡೆಗೆ ಸಂಕೇತಮಾಡಿದಳು. "ನನ್ನ ಮಗ—ತಾವೇ ಅವನಿಗೆ ಜೀವನ ಕೊಡಲು ಸಮರ್ಥರಾಗಿರುವಿರಿ!?" ಮುದುಕಿ ಹೃದಯವನ್ನೇ ಅವರ ಮುಂದಿಟ್ಟಳು.

ಆಚಾರ್ಯರು ಒಳಗೆ ನಡೆದರು. ಶಿಷ್ಟಾಚಾರಕ್ಕಾಗಿ ಪಂಡಿತರೂ ಅವರ ಶಿಷ್ಯರೂ ಹಿಂದೆಯೇ ಹೋಗಬೇಕಾಯಿತು.

"ಪಂಡಿತರೇ! ತಮ್ಮ ಪವಿತ್ರ ಹಸ್ತವನ್ನು ಈತನ ಮಸ್ತಕದಲ್ಲಿರಿಸಿರಿ" ಆಚಾರ್ಯರು ಅನುರೋಧಿಸಿದರು.

"ನಾನು ಇದಕ್ಕೆ ಯೋಗ್ಯನಲ್ಲ" ಎಂದು ಹೇಳುತ್ತ ಪಂಡಿತರು ಮುಂದರಿದರು.

"ತಾವು ಬ್ರಾಹ್ಮಣನ ಮೇಲೆ ಅನುಗ್ರಹವಾಡಬೇಕು." ಆಚಾರ್ಯರ ಸ್ವರದಲ್ಲಿ ಆದೇಶವಿತ್ತು. ಪಂಡಿತರು ವೆಂಕಟನ ಮಸ್ತಕದ ಮೇಲೆ ಹಸ್ತವನ್ನಿರಿಸಿದರು. ಕೂಡಲೇ ಅವರನ್ನು ಯಾರೋ ದೂಡಿದಂತಾಯಿತು; ಬಿಕ್ಕಿ ಬಿಕ್ಕಿ ಅಳುತ್ತಾ ಆಚಾರ್ಯರ ಚರಣಗಳ ಮೇಲೆ ಮಸ್ತಕವನ್ನಿರಿಸಿದರು. ತಮ್ಮ ವಿದ್ವಾಂಸರಾದ ಗುರುಗಳು ಹೀಗೇಕೆ ಮಾಡುತ್ತಿರುವರೆಂದು ನೋಡಲು ಶಿಷ್ಯರು ಮುಂದೆ ಬಂದರು. ಬಡ ಮುದುಕಿಯು ಒಂದು ಮೂಲೆಯಲ್ಲಿ ಕಲ್ಲುಗೊಂಬೆಯಂತೆ ನಿಂತಿದ್ದಳು. ಅವಳ ಪುತ್ರನನ್ನು ಸ್ಪರ್ಶಿಸುತ್ತಲೇ ಬ್ರಾಹ್ಮಣನ ಸ್ಥಿತಿಯು ಹೀಗಾದುವನ್ನು ನೋಡಿ ಅವಳು ಇನ್ನು ಪುತ್ರನು ಹೇಗೆ ಸೌಖ್ಯಹೊಂದುವನೋ ಎಂದು ಎಣಿಸಿದಳು.

"ವೆಂಕಟ!" ಆಚಾರ್ಯರು ಮುಂದುವರಿದರು. ಅವರು ಆ ಶಾಂತ, ಸ್ಥಿರವಾದ ತರುಣನ ಮಸ್ತಕದ ಮೇಲೆ ಕೈಯಿಟ್ಟು, ಸ್ನೇಹ ಸ್ನಿಗ್ಧ ಸ್ವರದಲ್ಲಿ ಕರೆದರು. ಮೆಲ್ಲಮೆಲ್ಲನೆ ಕಣ್ಣು ತೆರೆದು, ಅಪರಿಚಿತ ಸ್ಥಾನದಲ್ಲಿ ಬಂದು ನೋಡುವಂತೆ ಒಂದು ಬಾರಿ ವೆಂಕಟನು ಇತ್ತ ಅತ್ತ ನೋಡಿ ಆಚಾರ್ಯರ ಚರಣದ ಮೇಲೆ ಮಸ್ತಕವನ್ನಿಟ್ಟನು.

"ವೆಂಕಟ! ಮಗೂ!" ಆಚಾರ್ಯರು ಅವನನ್ನು ಎಬ್ಬಿಸಿ ಆಲಿಂಗಿಸಿದರು. ಅವರ ಕಣ್ಣುಗಳು ನೀರು ತುಂಬಿದ್ದುಕೊಂಡು ವಾಣಿಯು ವಾತ್ಸಲ್ಯದಿಂದ ಕೂಡಿತ್ತು. ಈ ಪ್ರಕಾರವಾಗಿ ಆಚಾರ್ಯರು ಬಹಳ ಹೊತ್ತಿನವರೆಗೆ ವೆಂಕಟನನ್ನು ಆಲಿಂಗಿಸಿದರು.

"ಶ್ರೀರಂಗನ ಚರಣಗಳನ್ನು ಧ್ಯಾನಿಸಿ ಹೇಗೆ ಎಲ್ಲಾ ಕರ್ಮಬಂಧನಗಳಿಂದ ಬಿಡುಗಡೆಯಾಗುವುದೆಂದು ನಾನು ನಿನಗೆ ಹೇಳಿದ್ದೆನು."

ಆಚಾರ್ಯರ ಪ್ರೇಮವು ಆ ಗುಡಿಸಲಿನಲ್ಲಿ ಸಂಪೂರ್ಣವಾಗಿತ್ತು. ಭಗವತ್ಪ್ರಸಾದವನ್ನು ತೆಗೆದುಕೊಂಡು ಎಲ್ಲರೂ ಸ್ಥಿರಚಿತ್ತರಾಗಿ ಕುಳಿತುಕೊಂಡಿದ್ದರು. ತನ್ನ ಪದತಲದಲ್ಲಿ ಕೂತುಕೊಂಡಿದ್ದ ವೆಂಕಟನನ್ನು ಆಚಾರ್ಯರು ಸಂಬೋಧಿಸುತ್ತಿದ್ದರು. "ಇನ್ನು ಪಂಡಿತರು ನಿನಗೆ, ಯಾವ

ಪ್ರಕಾರದಲ್ಲಿ ಜ್ಞಾನದ ಮೂಲಕ ನೀನು ಈ ಭವಸಾಗರವನ್ನು ದಾಟಿ ಮೃತ್ಯುಬಂಧನದಿಂದ ಮುಕ್ತನಾಗುವಿಯೆಂದು ಹೇಳುವರು.”

“ನನ್ನಂಥ ಅಧಮರಿಗೆ ಮೃತ್ಯು-ಬಂಧನದಿಂದ ಮೋಕ್ಷಮಾರ್ಗವು ಯಾರ ಸ್ಪರ್ಶದಿಂದ ಕೂಡಲೇ ತಿಳಿದುಬರುತ್ತದೋ ಅವರಿಗೆ ನಾನೇನು ಹೇಳಲಿ?”— ಪಂಡಿತರು ಆತುರತೆಯಿಂದ ಆಚಾರ್ಯರ ಚರಣಗಳನ್ನು ಹಿಡಿದು, “ಪ್ರಭೋ! ಈ ಅಹಂಕಾರಿಯ ಮೇಲೆ ದಯಮಾಡಿರಿ. ಯಾರ ಮನಸ್ಸು ಶ್ರೀರಂಗನನ್ನು ಹೊಂದಿಕೊಂಡಿದೆಯೋ, ಅವರು ನಿತ್ಯಮುಕ್ತರಾಗಿದ್ದಾರೆಂದು ನನಗೆ ತಿಳಿದುಬಂತು. ನಾನು ಕೃಪಾಮಯನಿಗೆ ಶರಣು ಬಂದಿದ್ದೇನೆ” ಎಂದರು.

Edited, Printed & Published by K. V. Shenoy
at The Prabhat Printers, Ltd., Mangalore.